

ರೊಕ್ಕೆಲ್ಲ ಖಾಲಿ ಮಾಡ್ಕೊಂಡಿ ಅನಸ್ತದ' ಎಂದು ಖುಷಿ ವ್ಯಕ್ತಪಡಿಸಿದ್ದು ಕಂಡು ಅವನಿಗೆ ಸಮಾಧಾನವಾಯಿತು.

ಈ ಮೊದಲು ಖಾನಾವಳಿಯನ್ನು ಒಳ್ಳೆಯ ರೇಟ್ ಬಂದರೆ ಮಾರಿಬಿಡುವುದಾಗಿ ಯೋಚಿಸಿದ್ದ ಧರೆಪ್ಪನಿಗೆ ಆಸ್ಪತ್ರೆಯ ಓಡಾಟದ ನಡುವೆ ವ್ಯವಹಾರ ಕುದುರಿಸಲು ಸಮಯ ಸಿಕ್ಕಿರಲಿಲ್ಲ. ಅದರಲ್ಲೂ ಈಗ ಖಾನಾವಳಿ ಹೊಸ ವೇಷದಲ್ಲಿ ಕಂಗೊಳಿಸುತ್ತಿರುವುದು ಅವನಲ್ಲಿ ಉತ್ಸಾಹ ಮೂಡಿಸಿತ್ತು. ಆದದ್ದಾಗಲಿ ಇನ್ನಷ್ಟು ದಿನ ನಡೆಸಿಕೊಂಡು ಹೋದರಾಯಿತೆಂದು ತೀರ್ಮಾನಿಸಿದ. ತಿಂಗಳೊಪ್ಪತ್ತಿನಲ್ಲಿ ಮತ್ತೆ ಖಾನಾವಳಿ ಶುರುವಾಯಿತು. ಹಳ್ಳಿ ಶೈಲಿಯಲ್ಲಿಯೇ ಆಧುನಿಕತೆಗೆ ಮುಕ್ತವಾಗಿ ತೆರೆದುಕೊಂಡಿತ್ತು. ಊಟಕ್ಕೆ ಬಂದವರು 'ಏನ ಕಾಕಾ ಫುಲ್ ಮಾಡರ್ನ್ ಮಾಡಿರಲ ಖಾನಾವಳಿ' ಎಂದು ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಅದರಲ್ಲೂ ಮುನಿಸಿಪಾಲಿಟಿಯಿಂದ, ದವಾಖಾನೆಗಳಿಂದ ಜನ ಖಾಯಂ ಆಗಿ ಊಟಕ್ಕೆ ಬರಲಾರಂಭಿಸಿದರು. ಕೆಲವೇ ದಿನಗಳಲ್ಲಿ ಧರೆಪ್ಪನಿಗೆ ಕೈ ತುಂಬ ಕೆಲಸವಾಯಿತು. ಜೊತೆಗೆ ಅವನ ವರ್ತನೆಯಲ್ಲಿಯೂ ನಿಧನಿಧಾನ ಬದಲಾವಣೆ ಕಾಣಲಾರಂಭಿಸಿತು.

ಈಗ ಮಾದೇವನೇ ಮುಂದಾಗಿ ದಿನಾಲೂ ಸಾಯಂಕಾಲ ಎ.ಪಿ.ಎಂ.ಸಿಗೆ ಹೋಗಿ ತರಕಾರಿ ತರುವುದರ ಜೊತೆಗೆ, ಗಿರಾಕಿಗಳಿಗೆ ತಾನೇ ಊಟ ನೀಡುತ್ತಿದ್ದ. ಒಂದೇ ಒಂದು ಕ್ಷಣ ಮಾದೇವ ಕಾಣದೇ ಇದ್ದರೆ ಧರೆಪ್ಪ 'ಮಾದ್ಯಾ ಎಲ್ಲಿ ಸತ್ತ ನೋಡ್ರೊ'